# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 464 |
| 2. | ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| 3. | ಉತ್ತರಿಸಬೇಕಾದ ದಿನಾಂಕ | : | 12.12.2024. |
| 4. | ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರವು 2019-20, 2020-21, 2021-22, 2022-23 ಮತ್ತು 2023-24 ಆರ್ಥಿಕ ವರ್ಷಗಳಲ್ಲಿ ಭಾರತದ ರಿಸರ್ವ್ ಬ್ಯಾಂಕ್, ಮತ್ತು ಇತರ ಮೂಲಗಳಿಂದ ಪಡೆದಿರುವ ಸಾಲವೆಷ್ಟು; ಮತ್ತು ಈ ರೀತಿ ಪಡೆದ ಸಾಲ ಜಿಡಿಪಿಯ ಶೇಕಡಾ ಎಷ್ಟರಷ್ಟು ಇದೆ; ಹಾಗೂ ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಸಾಲಮಿತಿಗೆ ಒಳಪಟ್ಟಿದೆಯೇ; (ಮಾಹಿತಿ ನೀಡುವುದು) | ಮಹಾಲೇಖಪಾಲರ ಲೆಕ್ಕದ ಮಾಹಿತಿಯನುಸಾರ 2019-20 ನೇ ಸಾಲಿನಿಂದ 2023-24ನೇ ಸಾಲಿನ ಅಂತ್ಯದವರೆಗಿನ ಸಾರ್ವಜನಿಕ ಸಾಲದ ವಿವರಗಳು, ಜಿ.ಎಸ್.ಡಿ.ಪಿಯ ದರ ಮತ್ತು ಶೇಕಡಾವಾರು ಮಾಹಿತಿಯು ಈ ಕೆಳಕಂಡಂತಿರುತ್ತದೆ: |

(ರೂ. ಕೋಟಿಗಳಲ್ಲಿ)

| ವಿವರಗಳು | 2019-20 | 2020-21 | 2021-22 | 2022-23 | 2023-24 |
|---|---|---|---|---|---|
| ಆಂತರಿಕ ಸಾಲ (ಮುಕ್ತ ಮಾರುಕಟ್ಟೆ & ನಬಾರ್ಡ್ ಸಾಲ) | 49,784 | 70,414 | 60,461 | 39,283 | 84,334 |
| ಭಾರತ ಸರ್ಕಾರದ ಸಾಲ | 675 | 1,707 | 2,070 | 5,266 | 5,946 |
| ಒಟ್ಟು ಮೊತ್ತ | 50,459 | 72,121 | 62,532 | 44,549 | 90,280 |
| ನಿವ್ವಳ ಮೊತ್ತ | 40,279 | 61,105 | 46,560 | 28,606 | 67,827 |
| ಜಿ.ಎಸ್.ಡಿ.ಪಿ ( ಪ್ರಸಕ್ತ ಬೆಲೆಗಳು) | 16,98,685 | 18,03,609 | 17,21,336 | 21,81,217 | 25,67,340 |
| ಶೇಕಡವಾರು ಜಿ.ಎಸ್.ಡಿ.ಪಿ (ನಿವ್ವಳ ಮೊತ್ತಕ್ಕೆ) | 2.4% | 3.4% | 2.8% | 1.3% | 2.6% |
| ವಿತ್ತೀಯ ಕೊರತೆ | 2.2% | 3.0% | 2.8% | 2.1% | 2.6% |

ರಾಜ್ಯ ಸರ್ಕಾರವು ಪಡೆದ ಒಟ್ಟು ಸಾಲ ಕರ್ನಾಟಕ ಆರ್ಥಿಕ ಹೊಣೆಗಾರಿಕೆ

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಅಧಿನಿಯಮದ ಮಾನದಂಡ ಮತ್ತು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಸಾಲಮಿತಿಗೆ ಒಳಪಟ್ಟಿದೆ.</td></tr>
<tr><td>ಆ.</td><td>ರಾಜ್ಯ ಸರ್ಕಾರ ಈ ರೀತಿ ಸಾಲವನ್ನು ಪಡೆಯಲು ಯಾವ ರೀತಿ ಆಧಾರಗಳನ್ನು ನೀಡುತ್ತಿದೆ; ಮತ್ತು ಈ ಬಗ್ಗೆ ನಿಯತಕಾಲಿಕವಾಗಿ ಕೇಂದ್ರ ಸರ್ಕಾರದಿಂದ ಆಧಾರ, ಅನುಮತಿ ಮತ್ತು ಸಹಮತಿ ಪಡೆಯಲಾಗಿದೆಯೇ; (ಪೂರ್ಣ ಮಾಹಿತಿ ನೀಡುವುದು)</td><td>ರಾಜ್ಯ ಸರ್ಕಾರವು ಸಾಲಪಡೆಯುವ ಮುನ್ನ ಭಾರತೀಯ ಸಂವಿಧಾನ ಅನುಚ್ಛೇದ 293(3) ರಡಿ ಕೇಂದ್ರ ಸರ್ಕಾರದ ಅನುಮತಿ ಪಡೆಯುತ್ತದೆ. ಇದಕ್ಕೆ ಯಾವುದೇ ಆಧಾರಗಳನ್ನು ನೀಡುವುದಿಲ್ಲ.</td></tr>
<tr><td>ಇ</td><td>ರಾಜ್ಯ ಸರ್ಕಾರ ಮೇಲ್ಕಂಡ ವರ್ಷಗಳಲ್ಲಿ ಪಡೆದ ಸಾಲವನ್ನು ಯಾವ ಯಾವ ಬಾಬ್ತುಗಳಿಗೆ ಬಳಸಿಕೊಳ್ಳಲಾಗಿದೆ ಹಾಗೂ ಈ ಸಾಲದಲ್ಲಿ ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ವಲಯಗಳಲ್ಲಿ ವೆಚ್ಚ ಮಾಡಿದ ಮೊತ್ತವೆಷ್ಟು; (ವರ್ಷವಾರು, ವಲಯವಾರು ಮತ್ತು ಐಟಂವಾರು ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು)</td><td>ಸರ್ಕಾರವು ಆರ್ಥಿಕ ವರ್ಷದಲ್ಲಿ ಪಡೆಯು ಸಾಲವನ್ನು, ಬಂಡವಾಳ ವೆಚ್ಚದ ಯೋಜನೆಗಳಿಗೆ, ಸಾಲ ಮರುಪಾವತಿ ಮಾಡಲು ಹಾಗೂ ರಾಜಸ್ವ ಕೊರತೆ ಉಂಟಾದಲ್ಲಿ ಅದನ್ನು ಭರಿಸಲು ವಿನಿಯೋಗಿಸುತ್ತದೆ.<br>ಅಭಿವೃದ್ಧಿ ವೆಚ್ಚದಲ್ಲಿ ಸರ್ಕಾರವು ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ವಿನಿಯೋಗಿಸುವ ವೆಚ್ಚವು ಒಳಗೊಂಡಿರುತ್ತದೆ. ಸಾಮಾನ್ಯ ಸೇವೆಗಳಿಗೆ ನೀಡುವ ವೆಚ್ಚವನ್ನು ಅಭಿವೃದ್ಧಿಯೇತರ ವೆಚ್ಚವೆಂದು ಪರಿಗಣಿಸಲಾಗುವುದು. ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ವೆಚ್ಚಕ್ಕೆ ಬಳಕೆಯಾಗಿರುವ ವಿವರಗಳು ಕೆಳಕಂಡಂತಿದೆ.<br>(ರೂ. ಕೋಟಿಗಳಲ್ಲಿ)
<table>
<tr><th>ವಿವರಗಳು</th><th>2019-20</th><th>2020-21</th><th>2021-22</th><th>2022-23</th><th>2023-24</th></tr>
<tr><td>ಅಭಿವೃದ್ಧಿ ವೆಚ್ಚ</td><td>1,57,822</td><td>1,62,219</td><td>1,91,283</td><td>1,97,049</td><td>2,14,292</td></tr>
<tr><td>ಅಭಿವೃದ್ಧಿಯೇತರ ವೆಚ್ಚ</td><td>66,214</td><td>72,926</td><td>84,621</td><td>95,076</td><td>1,07,368</td></tr>
</table></td></tr>
<tr><td>ಈ</td><td>ರಾಜ್ಯದ ಜಿಡಿಪಿ ಶೇ 3 ಕ್ಕಿಂತ ಹೆಚ್ಚುಪಟ್ಟು ಸಾಲದ ಹೊರೆ ಇದ್ದಲ್ಲಿ ಸರ್ಕಾರದ ಬೊಕ್ಕಸಕ್ಕೆ ಹೆಚ್ಚುವರಿ ತೆರಿಗೆ ಭರಿಸಲು ರಾಜ್ಯ ಸರ್ಕಾರದ ಕ್ರಮಗಳು ಯಾವುವು; ಈ ಬಗ್ಗೆ ಪೂರ್ಣ ಮಾಹಿತಿ</td><td>ರಾಜ್ಯ ಸರ್ಕಾರವು ರಾಜಸ್ವ ಹಾಗು ಬಂಡವಾಳ ಸ್ವೀಕೃತಿಗಳಿಂದ ಮತ್ತು ಕೇಂದ್ರ ಸರ್ಕಾರ ನಿಗದಿಪಡಿಸುವ ಮಿತಿಯೊಳಗೆ ಸಾಲವನ್ನು ಪಡೆಯುವ ಮೂಲಕ ಆಯವ್ಯಯದಲ್ಲಿ ಅಂದಾಜಿಸಿರುವ ವೆಚ್ಚವನ್ನು ಭರಿಸುತ್ತದೆ. ಮೇಲೆ ತಿಳಿಸಿರುವ ಈ ಸ್ವೀಕೃತಿಗಳನ್ನು ಮೀರಿ ಈವರೆಗೂ ಯಾವುದೇ ವೆಚ್ಚದ ಹೊರೆ ರಾಜ್ಯ ಸರ್ಕಾರಕ್ಕೆ ಉಂಟಾಗಿರುವುದಿಲ್ಲ.</td></tr>
</table>

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | ನೀಡುವುದು | |
| ಈ | ರಾಜ್ಯ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಐದು ಗ್ಯಾರಂಟಿಗಳಿಗೆ ಆಯವ್ಯಯದ ಹೆಚ್ಚುವರಿ ವಿನಿಯೋಗ ಆಗುತ್ತಿರುವುದರಿಂದ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದಿಂದ ಸಾಲದ ಮಿತಿ ಹೆಚ್ಚಿಸಲು ಪ್ರಸ್ತಾವನೆ ಸಲ್ಲಿಸಿದೆಯೇ; ಅಥವಾ ಆಯವ್ಯಯೇತರ ಮೂಲಗಳಿಂದ ಸಾಲ ಪಡೆಯಲು ಪ್ರಯತ್ನಿಸಿದೆಯೇ (ಪೂರ್ಣ ಮಾಹಿತಿ ನೀಡುವುದು) | ಸರ್ಕಾರವು ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸದರಿ ಯೋಜನೆಗಳಿಗೆ ಆಯವ್ಯಯದಲ್ಲಿಯೇ ಸೂಕ್ತ ಅನುದಾನವನ್ನು ಒದಗಿಸುತ್ತದೆ<br><br>ಇದಕ್ಕಾಗಿ ಸಾಲ ಹೆಚ್ಚಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ ಮತ್ತು ಆಯವ್ಯಯೇತರ ಮೂಲಗಳಿಂದ ಸಾಲ ಪಡೆಯಲು ಪ್ರಸ್ತಾವನೆ ಸಲ್ಲಿಸಿರುವುದಿಲ್ಲ. |

ಸಂಖ್ಯೆ: ಆಇ 94 ಬಿಜೆಎಲ್ 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ